ದಿನಾಂಕಃ 15-10-2025.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀಮತಿ PNJ ಮಾನ್ಯ ವಕೀಲರಿಂದಃ**

ಸಿಸಿ ನಂಬರ 1201/2025 ರ ಆದೇಶ ಪುಟದ ದೃಡೀಕೃತ ನಕಲನ್ನು ನಿಪಿ.14 ಎಂದು ಗುರುತಿಸಲಾಯಿತು. ಸಾಕ್ಷಿಯು ಈ ದಿನ ತಮ್ಮ ಮೂಲ DL ನ್ನು ಹಾಗೂ ಅದರ notary attested ಪ್ರತಿಗಳನ್ನು ಹಾಜರುಪಡಿಸಿದ್ದು ಸದರಿ ಎರಡು ದಾಖಲೆಗಳನ್ನು ಪರಿಶೀಲನೆ ಮಾಡಿ ಸಾಕ್ಷಿಗೆ ಅವರ ಮೂಲ ದಾಖಲೆಯನ್ನು ಹಿಂದುರುಗಿ ಕೊಡಲಾಯಿತು. ಸಾಕ್ಷಿಯ DL ನ notary attested ಪ್ರತಿಯನ್ನು ನಿಪಿ.15 ಎಂದು ಗುರುತಿಸಾಯಿತು. ನನ್ನ ಅರ್ಜಿಯನ್ನು ನಾನು ಕೇಳಿರುವಂತೆ ಪುರಸ್ಕರಿಸಬೆಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ 2 ನೇ ಎದುರುದಾರರ ಪರ ಶ್ರೀ GSD ಮಾನ್ಯ ವಕೀಲರಿಂದಃ**

2. ನಾನು B.com ಪದವೀಧರ. ಸದರಿ ಅಪಘಾತವಾದ ದಿನದಂದು ಸದರಿ ಮೋಟಾರ ಸೈಕಲನ ಮೇಲೆ ಹೋಗುವ ಸಮಯದಲ್ಲಿ ನಾನಾಗಲೀ ಅಥವಾ ನನ್ನ ತಾಯಿಯವರಾಗಲೀ ತಲೆಗೆ helmet ನ್ನು ಹಾಕಿರಲಿಲ್ಲ. ನಾನು ದಾಲ್ ಮಿಲ್ ವ್ಯಾಪಾರವನ್ನು ಮಾಡುತ್ತಿದ್ದು ಅದರಿಂದ ಪ್ರತಿ ತಿಂಗಳು ರೂ.30,000/- ಆದಾಯವನ್ನು ಹೊಂದಿದ್ದೆ. ನಾನು ಆದಾಯ ತೆರಿಗೆಯನ್ನು ಕಟ್ಟುವುದಿಲ್ಲ. ಸದರಿ splender motorcycle ನ ಚಾಲಕ DL ಹೊಂದಿದ್ದರೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಚಾಲಕ DL ಹೊಂದಿರುವುದಿಲ್ಲ ಎಂದು ಹೇಳಿ ಅವರು ಕೆಳ ನ್ಯಾಯಾಲಯದಲ್ಲಿ penalty ನ್ನು ಕಟ್ಟಿದ್ದರಿಂದ 2 ನೇ ಎದುರುದಾರರು ನನಗೆ ಯಾವುದೇ ಪರಿಹಾರದ ಹಣವನ್ನು ಕೊಡುವ ಭಾದ್ಯತೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯಲು ನಾನು ಸುಳ್ಳಾದ ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.